ಹಾಗಾಗಿ, ಮೂವರು ಹುಡುಗಿಯರು ಮತ್ತು ಮೂವರು ಹುಡುಗರಿದ್ದ ನಮ್ಮ ತಂಡಕ್ಕೆ ಮತ್ತೆ ಹರೆಯ ಬಂದಂತೆನಿಸಿತ್ತು. ನಮ್ಮ ಕಲಿಕೆಯ ಕೊನೆಯ ವರ್ಷದ ತರಬೇತಿ ಶಿಬಿರಕ್ಕೆಂದು ಎಲ್ಲರೂ ಒಟ್ಟಿಗೆ ಹೋಗುತ್ತಿದ್ದೆವು.

ನಾವೆಲ್ಲ ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಂಗ ಮಾಡಲು ಸೇರಿದ್ದ ದಂತ ವೈದ್ಯರು. ಪರಸ್ಪರ ಪರಿಚಯವಾಗಿ ಎರಡು ವರ್ಷ ಕಳೆದಿದ್ದರೂ ಹೀಗೆ ಒತ್ತಟ್ಟಿಗೆ ತರಬೇತಿ ಶಿಬಿರಕ್ಕೆಂದು ಹೊರಗೆ ಹೋಗುತ್ತಿದ್ದುದು ಇದು ಎರಡನೇ ಬಾರಿ ಮಾತ್ರ. ಮೊದಲ ವರ್ಷದ ತರಬೇತಿಯಲ್ಲಿ ಲಂಡನ್ನಿನ ಎರಡು ದಿನಗಳ ಕೋರ್ಸ್ ಒಂದಕ್ಕೆ ಹೋಗಿದ್ದೆವು. ಮೊದಲ ದಿನದ ತರಬೇತಿ ಬಹಳ ತೀವ್ರವಾಗಿತ್ತು. ಅನಂತರ, ಆವತ್ತು ರಾತ್ರಿ 'ಬಿಲ್ಲಿ ಎಲ್ಲಿಯಟ್' ಮ್ಯೂಸಿಕಲ್ ನೋಡಿಕೊಂಡು, ಕೊರಿಯನ್ ರೆಸ್ಟೋರೆಂಟ್ ಒಂದರಲ್ಲಿ ಊಟ ಮಾಡಿ, ಹೋಟೆಲು ಸೇರುವಲ್ಲಿ ಮಧ್ಯರಾತ್ರಿ ಕಳೆದುಬಿಟ್ಟಿತ್ತು. ಹೀಗಾಗಿ, ಮರುದಿನದ ತಯಾರಿಗಾಗಿ ತ್ವರಿತವಾಗಿ ಹೋಟೆಲಿಗೆ ದೌಡಾಯಿಸಿದ್ದೆವು. ಎರಡನೆಯ ದಿನ ಮುಗಿದಾಗ ಎಲ್ಲರಿಗೂ ಸುಸ್ತಾಗಿದ್ದುದರ ಜೊತೆಗೆ ತಮ್ಮ ತಮ್ಮ ಜಾಗಗಳಿಗೆ ಹಿಂತಿರುಗುವ ಅವಸರವಾಗಿತ್ತು. ಹಾಗಾಗಿ, ಸಮಯದ ಒತ್ತಡವಿಲ್ಲದೆ ಎಲ್ಲರೂ ಒಟ್ಟಾಗಿ ನಾಲ್ಕು ದಿನ ಸೇರಿದ್ದು ಇದೇ ಮೊದಲಬಾರಿ ಎನ್ನಬಹುದು.

## 2

ಸ್ವೀಡನ್ನಿನ ಪ್ರಮುಖ ನಗರ ಗೋಥೆನ್‌ಬರ್ಗ್ ತಲುಪಿದಾಗ ಸಂಜೆಯ ನಾಲ್ಕು ಗಂಟೆ. ಫೆಬ್ರುವರಿ ತಿಂಗಳಾಗಿದ್ದರಿಂದ ಹೊರಗೆ ಸಣ್ಣಗೆ ಹಿಮ ಬೀಳುತ್ತಿತ್ತು. ಎಲ್ಲೆಲ್ಲೂ ಹಿಮದ ಬಿಳಿಯ ಹಾಸು ಹಾಸಿತ್ತು. ಏರ್‌ಪೋರ್ಟಿನಿಂದ ಹೊರಬಂದಾಗ ನಮಗಾಗಿ ದೊಡ್ಡದೊಂದು ಕೋಚ್ ಕಾಯುತ್ತಿತ್ತು.

ರಸ್ತೆ ಸವೆದಂತೆಲ್ಲ ನಮ್ಮ ದೈನಂದಿನ ವೃತ್ತಿ, ಓದು, ಕಲಿಕೆ ಮತ್ತು ಸಂಸಾರಗಳು ಹಿಂದಕ್ಕೆ ಸರಿಯುತ್ತಿದ್ದವು. ವಿರಾಮ, ವಿಲಾಸ, ಬದಲಾವಣೆ, ಹೊಸತುಗಳ ನಿರೀಕ್ಷೆಯಲ್ಲಿ ಮನಸ್ಸುಗಳು ಅರಳುತ್ತಿದ್ದವು. ಹಗೂರಕ್ಕೆ ಸುರಿಯುತ್ತಿದ್ದ ಹಿಮ ಎಂತಹದೋ ಸಂಭ್ರಮವನ್ನು ಸೃಷ್ಟಿಸುತ್ತ, ತೇಲಿ ತೇಲಿ ಕೆಳಗಿಳಿದು ಧರೆಯ ಉಡಿಯಲ್ಲಿ ಸೇರಿ ಕರಗುತ್ತಿತ್ತು.

ಆಗಾಗಲೇ ವಿಮಾನದಲ್ಲಿ ನಾಲ್ಕು ಗಂಟೆ ಕೂತಿದ್ದರಿಂದ ನನ್ನ ಇಂಗ್ಲಿಷ್ ಗೆಳತಿ ಕ್ಯಾಟ್ (ಕ್ಯಾಥರೀನ್) ಹೋಟೆಲ್ ತಲುಪಿದ ಕೂಡಲೆ ಜಾಗಿಂಗ್‌ಗೆ ಹೋಗುವ ವಿಚಾರ ಹೇಳಿದಳು. ಹೊರಗಿನ ಹವಾಮಾನ ಮೈನಸ್ ಎರಡು ಡಿಗ್ರಿ ಇತ್ತು. ನಾನು ನನ್ನ ಕೋಟನ್ನು ಮತ್ತಷ್ಟು ಬಿಗಿಯಾಗಿ ಎಳೆದು ಕೂತೆ. ತನಗೆ ಬೇಕೆಂದಾಗ ಮಾತ್ರ ಮಾತನಾಡಿಸತ್ತಿದ್ದ ಅವಳನ್ನು ಉಪೇಕ್ಷಿಸಿದೆ.

ಇದ್ದವರಲ್ಲಿ ರಷ್ಯಾದ ಡಿಮಿಟ್ರಿ ನನ್ನ ಅಭಿರುಚಿಗೆ ಹೊಂದುವಂತಿದ್ದ ಗೆಳೆಯನಾಗಿದ್ದ. ಅವನದು ಸರಳ ಮತ್ತು ಸಾಹಸಿ ಸ್ವಭಾವ. ಮಾಂಸಖಂಡಗಳನ್ನು ಮಜಬೂತಾಗಿ ಬೆಳೆಸಲು ಟೆಸ್ಟೋಸ್ಟೆರಾನ್ ಹಾರ್ಮೋನುಗಳ ಔಷಧವನ್ನು ಬಳಸಿ ಅವನ ತಲೆಯ ಎಲ್ಲ ಕೂದಲುಗಳು ಉದುರಿಹೋಗಿದ್ದವು. ಕ್ಯಾಲೊರಿಗಳು, ಪ್ರೋಟೀನ್‌ಗಳು ಅಂತೆಲ್ಲ ಲೆಕ್ಕ ಹಾಕುತ್ತಿದ್ದ ಅವನು ಸ್ಟ್ರಿಕ್ಟ್ ಡಯೆಟ್‌ನಲ್ಲಿರುತ್ತಿದ್ದ. ಮದ್ಯ ಕುಡಿಯುತ್ತಿರಲಿಲ್ಲ. ಹೀಗಾಗಿ, ಎಲ್ಲರೂ ಕುಡಿಯಲು ಕೂತಾಗ, ಹಣ್ಣಿನ ರಸ ಹಿಡಿದು ಮಾತಿಗೆ ಇಳಿಯುತ್ತಿದ್ದ. ಅವನ ಪರಿಚಯವಾದಾಗ ಅವನ ರಷ್ಯನ್ ರೀತಿಯ ಇಂಗ್ಲಿಷ್ ಉಚ್ಚಾರವನ್ನು ಅರ್ಥ ಮಾಡಿಕೊಳ್ಳಲು ಹೆಣಗಿದ್ದೆ.

ನಮ್ಮಲ್ಲಿ ಬಹುತೇಕರು ಇಂಗ್ಲೆಂಡಿನಲ್ಲಿ ಅರೆಕಾಲಿಕ ಕೆಲಸಮಾಡುತ್ತ, ವೃತ್ತಿಯ ಮಧ್ಯೆ ಬ್ರೇಕ್ ತಗೊಂಡು ಅಧ್ಯಯನ ಮುಂದುವರೆಸಲು ನಮ್ಮದೇ ಖರ್ಚಿನಲ್ಲಿ ವಿಶ್ವವಿದ್ಯಾಲಯ ಸೇರಿದ್ದೆವು. ಆರು ಜನರ ತರಗತಿ ಅದು. ಎರಡು ವರ್ಷಗಳ ಓದು. ಆದರೆ, ಡಿಮಿಟ್ರಿಯನ್ನು ರಷ್ಯಾ ಸರ್ಕಾರ ಸ್ಪಾನ್ಸರ್